# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ಕೃಷಿ ಇಲಾಖೆಗೆ ರೂ.100.00 ಕೋಟಿಗಳನ್ನು ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕಂಇ 449 ಟಿಎನ್‌ಆರ್ 2023, ದಿನಾಂಕ: 13.09.2023, 12.10.2023 ಮತ್ತು 04.11.2023.
2. ಆಯುಕ್ತರು, ಕೃಷಿ ಇಲಾಖೆ ರವರ ಪತ್ರ ಸಂಖ್ಯೆ: ಜಕೃನಿ(ಬೆಅ)/ಕೃ.ಭಾ.ಯೋ/ರಾ.ವಿ.ನಿ/ಪ್ರ/2023-24, ದಿನಾಂಕ: 10.11.2023.
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/315/ವೆಚ್ಚ-7/2024, ದಿನಾಂಕ: 13.03.2024.
4. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 552 ಟಿಎನ್‌ಆರ್ 2023, ದಿನಾಂಕ:16.03.2024.
5. ಕೃಷಿ ಇಲಾಖೆ ಕಡತ ಸಂಖ್ಯೆ: ಕೃಷಿ 72 ಎಎಂ ಎಲ್ 2024, ದಿನಾಂಕ: 07.05.2024
6. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/470/ವೆಚ್ಚ-7/2024, ದಿನಾಂಕ: 18.04.2024 ಮತ್ತು ಟಿಪ್ಪಣಿ ಸಂಖ್ಯೆ: ಆಇ/116/ಎಫ್ ಆರ್/2024, ದಿನಾಂಕ: 26.03.2024
7. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ) ರವರ ಅನಧಿಕೃತ ಟಿಪ್ಪಣಿ ಸಂಖ್ಯೆ: CS/34/SCM/2024, ದಿನಾಂಕ: 17.05.2024.
8. ಕೃಷಿ ಇಲಾಖೆ ಕಡತ ಸಂಖ್ಯೆ: ಕೃಷಿ 72 ಎಎಂ ಎಲ್ 2024, ದಿನಾಂಕ: 11.06.2024

*****

**ಪ್ರಸ್ತಾವನೆ:**

ರಾಜ್ಯದಲ್ಲಿ 2023ರ ಮುಂಗಾರು ಹಂಗಾಮಿನಲ್ಲಿ ಮಳೆಯ ಕೊರತೆಯ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ಬರ ಕೈಪಿಡಿ 2020ರ ಪ್ರಕಾರ ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಮೇಲೆ (1) ರಲ್ಲಿ ಓದಲಾದ ದಿನಾಂಕ: 13.09.2023, 12.10.2023 ಮತ್ತು 04.11.2023 ರ ಆದೇಶಗಳಲ್ಲಿ ಘೋಷಿಸಲಾಗಿರುತ್ತದೆ.

2023 ನೇ ಸಾಲಿನ ಜೂನ್ 1 ರಿಂದ ಸೆಪ್ಟೆಂಬರ್ 30 ರವರೆವಿಗೆ ಒಟ್ಟಾರೆಯಾಗಿ ರಾಜ್ಯದಲ್ಲಿ ವಾಡಿಕೆ ಮಳೆ 852 ಮಿ.ಮಿ. ಕ್ಕಿಂತ 642 ಮಿ.ಮಿ. ಮಳೆ ಮಾತ್ರ ಆಗಿದ್ದು, ಶೇ.25ರಷ್ಟು ಮಳೆಯ ಕೊರತೆಯಾಗಿರುತ್ತದೆ. ರಾಜ್ಯದಲ್ಲಿ 2023 ರ ಮುಂಗಾರು ಋತುವಿನ ದ್ವಿತೀಯಾರ್ಧದಲ್ಲಿ ದೊಡ್ಡ ಋತುಮಾನದ ವ್ಯತ್ಯಾಸಗಳಿಗೊಳಗಾದವು. ಮುಖ್ಯವಾಗಿ

ಆಗಸ್ಟ್ ನಲ್ಲಿ ಕಳೆದ 122 ವರ್ಷಗಳಲ್ಲಿ ಇದೆ ವರ್ಷ ಅತ್ಯಂತ ಕಡಿಮೆ ಮಳೆ ದಾಖಲಾಗಿದೆ; 2023 ರ ಜೂನ್ 1 ರಿಂದ 30 ಸೆಪ್ಟೆಂಬರ್ ವರೆಗೆ, ಸಾಮಾನ್ಯ ಮಳೆ ಹಾಗೂ ದೈನಂದಿನ ವಾಸ್ತವಿಕ ಮಳೆಯನ್ನು ಹೋಲಿಸಿದರೆ ರಾಜ್ಯವು 122 ದಿನಗಳಲ್ಲಿ ಕೇವಲ 24 ದಿನಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗಿರುವುದು ಕಂಡು ಬರುತ್ತದೆ. ಇದಲ್ಲದೆ, ಹವಾಮಾನ ಬದಲಾವಣೆಯಿಂದ ಅನಿಯಮಿತ ಮಳೆಯನ್ನು ಅಲ್ಪಾವಧಿಯಲ್ಲಿಯೇ ದೊಡ್ಡ ಪ್ರಮಾಣದ ಮಳೆಯ ಸನ್ನಿವೇಶಗಳು ಹೆಚ್ಚಾಗಿದ್ದು, ವಾಡಿಕೆ ಮಳೆ ಕಡಿಮೆಯಾಗಿರುವುದರಿಂದ ರಾಜ್ಯದ, ಅಣೆಕಟ್ಟು ಮತ್ತು ಅಂತರ್ಜಲದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ರಾಜ್ಯದಲ್ಲಿ ನೀರಿನ ಅಭಾವದ ಸ್ಥಿತಿ ಉಂಟಾಗಿರುವ ಕಾರಣ ರಾಜ್ಯವು ಬರ ಉಪಶಮನಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಕಳೆದ 23 ವರ್ಷಗಳಲ್ಲಿ (2001-2023) ಬರಪೀಡಿತ ತಾಲೂಕುಗಳ ಮಾಹಿತಿಯ ಪ್ರಕಾರ, ಸಾಮಾನ್ಯವಾಗಿ ಅತಿವೃಷ್ಟಿ ದಾಖಲಿಸುವ ಕರಾವಳಿ ಜಿಲ್ಲೆಗಳು ಮಾತ್ರ ಬರದಿಂದ ಮುಕ್ತವಾಗಿವೆ. ಆದಾಗ್ಯೂ, ಈ ಪ್ರದೇಶಗಳು ಸಹ ಅನಿಯಮಿತ ಮಳೆ ಹಂಚಿಕೆಗೆ ಹೆಚ್ಚು ದುರ್ಬಲವಾಗುತ್ತಿವೆ. 2001 ರಿಂದ 2023 ರವರೆಗಿನ ಇಪ್ಪತ್ತೂರು ವರ್ಷಗಳಲ್ಲಿ, ರಾಜ್ಯವು 2005, 2007, 2010, 2017, 2020, 2021 ಮತ್ತು 2022 ಹೊರತುಪಡಿಸಿ 16 ವರ್ಷಗಳು ಬರವನ್ನು ಅನುಭವಿಸಿದೆ. ಬರಗಾಲದಿಂದಾಗಿ ಸುಮಾರು ತಾಲ್ಲೂಕುಗಳು ಕಳೆದ 12 ರಿಂದ 15 ವರ್ಷಗಳಿಂದ ತೊಂದರೆಗೀಡಾಗಿರುತ್ತವೆ. ರಾಜ್ಯದಲ್ಲಿ ಬರಗಾಲಕ್ಕೆ ಅನಿಯಮಿತ ಹವಾಮಾನವೇ ಪ್ರಮುಖ ಕಾರಣ. ಕಳೆದ ಶತಮಾನದಲ್ಲಿ ರಾಜ್ಯದಲ್ಲಿ ಮಳೆಯ ಪ್ರಮಾಣವು ವ್ಯಾಪಕವಾಗಿ ಬದಲಾಗಿಲ್ಲ, ಆದರೆ ಮಳೆಯ ವಿತರಣೆಯು ತಾತ್ಕಾಲಿಕ ಮತ್ತು ಪ್ರಾದೇಶಿಕ ಎರಡೂ ಅನಿಯಮಿತವಾಗಿದೆ ಮತ್ತು ಅಂತಹ ಪರಿಸ್ಥಿತಿಗಳು ಕೃಷಿಗೆ ಹಾನಿಕಾರಕವಾಗಿದೆ. ಆದ್ದರಿಂದಾಗಿ, ಸಂಬಂಧಪಟ್ಟ ಎಲ್ಲಾ ಇಲಾಖೆಗಳನ್ನು ಒಟ್ಟುಗೂಡಿಸಿ ಕೃಷಿ ಭಾಗ್ಯ ಯೋಜನೆ ಅಂತಹ ಉಪಶಮನ ಕ್ರಮಗಳಿಂದಾಗಿ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಿ, ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಉಪಕಾರಿಯಾಗುವುದು ಪರಿಣಾಮಕಾರಿಯಾದ ಕ್ರಮವಾಗಿರುತ್ತದೆ.

ಕೃಷಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೃಷಿ ಭಾಗ್ಯ ಯೋಜನೆಯಡಿ ರೈತರ ಜಮೀನಿನಲ್ಲಿ ಬಿದ್ದ ಮಳೆ ನೀರನ್ನು ಸೂಕ್ತ ಸ್ಥಳದಲ್ಲಿ ಹೊಂಡ ತೆಗೆದು ಸಂಗ್ರಹಣೆ ಮಾಡಿ, ಬೆಳೆಗಳಿಗೆ ನೀರಿನ ಅಭಾವದ ಪರಿಸ್ಥಿತಿಯಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸಲು ಅನುಕೂಲವಾಗುವಂತೆ ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಅಡಿಯಲ್ಲಿ ರೂ.100.00 ಕೋಟಿಗಳ ಅನುದಾನವನ್ನು ಒದಗಿಸುವಂತೆ ಕೋರಿ ಮೇಲೆ (2) ರಲ್ಲಿ ಓದಲಾದ ದಿನಾಂಕ: 10.11.2023 ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕರ್ನಾಟಕದ ಒಟ್ಟು 223 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳನ್ನಾಗಿ ಘೋಷಿಸಲಾಗಿದ್ದು, ಆದ್ದರಿಂದ ಬರದ ವಿಪತ್ತು ಉಪಶಮನ ಪ್ರಸ್ತಾಪಗಳನ್ನು ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಅಡಿಯಲ್ಲಿ ತೆಗೆದುಕೊಳ್ಳಲು ಮತ್ತು ಕೃಷಿ ಭಾಗ್ಯ ಯೋಜನೆಯನ್ನು ಇದರಡಿ ಪರಿಗಣಿಸಲು ಅವಕಾಶವಿರುತ್ತದೆ ಹಾಗೂ ಸದರಿ ಪ್ರಸ್ತಾವನೆಯು ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಮಾರ್ಗಸೂಚಿಗಳ ಈ ಕೆಳಕಂಡ ಷರತ್ತುಗಳನ್ನು ಪೂರೈಸುತ್ತದೆ:

I. ಷರತ್ತು 9 (iv) - ವಿಪತ್ತು ಅಪಾಯಗಳು ಮತ್ತು ಅದರ ಪರಿಣಾಮಗಳನ್ನು ಕಡಿಮೆ ಮಾಡಲು ಉತ್ತೇಜಿಸುವ ಯೋಜನೆಗಳು.

II. ಅನುಬಂಧ - I - ಬರಗಾಲಕ್ಕೆ ಕೆಲವು ಅಪಾಯದ ನಿರ್ದಿಷ್ಟ ಉಪಶಮನ ಕ್ರಮಗಳು - ಸ್ಥಳೀಯ ಮೂಲಸೌಕರ್ಯಗಳ ಬಲವರ್ಧನೆ.

ಹನಿ ಮತ್ತು ತುಂತುರು ನೀರಾವರಿಯಂತಹ ಕಡಿಮೆ ವೆಚ್ಚ-ಪರಿಣಾಮಕಾರಿ ಮತ್ತು ನೀರನ್ನು ಸಂರಕ್ಷಿಸುವ ನೀರಾವರಿ ಪದ್ಧತಿಗಳ ರಚನೆ.

ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಮಾರ್ಗಸೂಚಿಗಳ ಅಡಿಯಲ್ಲಿ ಕೃಷಿ ಭಾಗ್ಯ ಯೋಜನೆಯು ಪರಿಗಣನೆಗೆ ಅರ್ಹವಾಗಿದ್ದು, ಸದರಿ ಪ್ರಸ್ತಾವನೆಯು ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆ ಆಗಿರುತ್ತದೆ.

ದಿನಾಂಕ: 28.02.2024 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಈ ಕೆಳಕಂಡಂತೆ ಪ್ರಸ್ತಾವನೆಯು ಅನುಮೋದನೆಯಾಗಿರುತ್ತದೆ:-

**i) ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ಕೃಷಿ ಇಲಾಖೆಗೆ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ರೂ. 100.00 ಕೋಟಿ ಮಂಜೂರು ಮಾಡಲು ಹಾಗೂ ಯೋಜನೆಯ ಮಾರ್ಗಸೂಚಿಗಳನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುದಾನವನ್ನು ಆಯುಕ್ತರು, ಕೃಷಿ ಆಯುಕ್ತಾಲಯ ಇವರಿಗೆ ಬಿಡುಗಡೆ ಮಾಡಲು,**

**ii) ಭಾರತ ಸರ್ಕಾರದಿಂದ ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDMF) ಅಡಿಯಲ್ಲಿ ಮಂಜೂರು ಮಾಡುವ ಅನುದಾನದಲ್ಲಿ ಹಾಗೂ ರಾಜ್ಯ ಸರ್ಕಾರದಿಂದ 10% ಅಂದರೆ ರೂ.10.00 ಕೋಟಿಗಳಷ್ಟು ರಾಜ್ಯದಿಂದ ಭರಿಸುವ ಮೊತ್ತವನ್ನು ಒಳಗೊಂಡಂತೆ ಬರ ಉಪಶಮನ ಯೋಜನೆಯನ್ನು ಅನುಷ್ಠಾನಗೊಳಿಸಲು. ಕೃಷಿ ಭಾಗ್ಯ ಯೋಜನೆಯ**

ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDMF) ಅಡಿಯಲ್ಲಿ ಅನುದಾನದ ಮಂಜೂರಾತಿ ನಿರೀಕ್ಷಿಸಲಾಗಿದೆ.

ಭಾರತ ಸರ್ಕಾರವು ರಾಷ್ಟ್ರೀಯ ವಿಪತ್ತು ಉಪಶಮನ ನಿಧಿಯಿಂದ, ಬರ ಉಪಶಮನಕ್ಕಾಗಿ ಕೃಷಿ ಭಾಗ್ಯ ಯೋಜನೆಯ ಮೂಲಕ ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ರೂ. 100 ಕೋಟಿಗಳನ್ನು ಬಿಡುಗಡೆ ಮಾಡಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯಾಗಿದ್ದು, ಪ್ರಸ್ತಾವನೆಯು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಉಪಸಮಿತಿಯ ಅನುಮೋದನೆಯ ಹಂತದಲ್ಲಿ ಇರುತ್ತದೆ.

ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ರೂ. 100.00 ಕೋಟಿ ಮಂಜೂರು ಮಾಡಲು ಮೇಲೆ (3) ರಲ್ಲಿ ಓದಲಾದ ದಿನಾಂಕ: 13.03.2024 ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸಹಮತಿಯನ್ನು ನೀಡಿದ್ದರ ಮೇರೆಗೆ, ಮೇಲೆ (4) ರಲ್ಲಿ ಓದಲಾದ ದಿನಾಂಕ: 16.03.2024 ರ ಸರ್ಕಾರಿ ಆದೇಶದಲ್ಲಿ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ರೂ.100.00 ಕೋಟಿಗಳನ್ನು ಆಯುಕ್ತರು, ಕೃಷಿ ಆಯುಕ್ತಾಲಯ ಇವರಿಗೆ ಬಿಡುಗಡೆ ಮಾಡಲು ಆದೇಶಿಸಲಾಗಿದ್ದು, ಆದರೆ, ಆರ್ಥಿಕ ವರ್ಷವು ಮುಕ್ತಾಯವಾದ ಕಾರಣ ಸದರಿ ಮೊತ್ತವನ್ನು ಬಿಡುಗಡೆಗೊಳಿಸಿರುವುದಿಲ್ಲ. ಹಾಗಾಗಿ, ಸದರಿ ಮೊತ್ತವನ್ನು 2024-25 ನೇ ಸಾಲಿನಲ್ಲಿ ಕೃಷಿ ಇಲಾಖೆಯ ಕೃಷಿ ಭಾಗ್ಯ ಯೋಜನೆಯ ಲೆಕ್ಕ ಶೀರ್ಷಿಕೆಯಾದ 2401-00-102-0-27ಕ್ಕೆ ಬಿಡುಗಡೆ ಮಾಡುವಂತೆ /ಒದಗಿಸುವಂತೆ ಕೃಷಿ ಇಲಾಖೆಯು ಮೇಲೆ ಓದಲಾದ (5)ರ ಮತ್ತು (8)ರ ಕಡತದಲ್ಲಿ ಕೋರಿರುತ್ತದೆ.

ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ರೂ.100.00 ಕೋಟಿಗಳನ್ನು ಕೃಷಿ ಇಲಾಖೆಗೆ 2024-25 ನೇ ಆರ್ಥಿಕ ಸಾಲಿನಲ್ಲಿ (1st Week of April 2024) ಬಿಡುಗಡೆಗೊಳಿಸುವಂತೆ ಮೇಲೆ (6) ರಲ್ಲಿ ಓದಲಾದ ದಿನಾಂಕ: 26.03.2024 ಮತ್ತು 18.04.2024 ರ ಟಿಪ್ಪಣಿಗಳಲ್ಲಿ ಆರ್ಥಿಕ ಇಲಾಖೆಯು ಅಭಿಪ್ರಾಯ ನೀಡಿರುತ್ತದೆ. ಸಾರ್ವತ್ರಿಕ ಲೋಕಸಭಾ ಚುನಾವಣಾ ಸಂಬಂಧ ಚುನಾವಣಾ ಮಾದರಿ ನೀತಿ ಸಂಹಿತೆ (MCC) ಜಾರಿಯಲ್ಲಿರುವುದರಿಂದ, ಕೃಷಿ ಭಾಗ್ಯ ಯೋಜನೆ ಅನುಷ್ಠಾನದಿಂದ ನೀರಿನ ಸಂರಕ್ಷಣೆ ಹಾಗೂ ಕೃಷಿ ಚಟುವಟಿಕೆಗಳಿಗೆ ನೀರಿನ ಪೂರೈಕೆಗೆ ಸಹಾಯವಾಗುವುದರಿಂದ, ಅನುದಾನವನ್ನು ಬಿಡುಗಡೆ ಮಾಡುವ ಈ ಪ್ರಸ್ತಾವನೆಗೆ ಭಾರತದ ಚುನವಣಾ ಆಯೋಗವು ಸಹಮತಿ/ವಿನಾಯಿತಿ ನೀಡಿರುತ್ತದೆಂದು ಮೇಲೆ (7) ರಲ್ಲಿ ಓದಲಾದ ದಿನಾಂಕ: 17.05.2024 ರ ಅನಧಿಕೃತ ಟಿಪ್ಪಣಿಯಲ್ಲಿ ಸಚಿವ ಸಂಪುಟ ಶಾಖೆಯು ತಿಳಿಸಿರುತ್ತದೆ. ಆದುದರಿಂದ ಕೃಷಿ ಭಾಗ್ಯ ಅನುಷ್ಠಾನಕ್ಕಾಗಿ ಮೇಲೆ ಓದಲಾದ (4) ರ ಸರ್ಕಾರಿ ಆದೇಶ ದಿನಾಂಕ: 16.03.2024ರಲ್ಲಿ ಕೃಷಿ ಆಯುಕ್ತರಿಗೆ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ

ಬಿಡುಗಡೆ ಮಾಡಲಾಗಿದ್ದ ರೂ. 100 ಕೋಟಿಗಳನ್ನು 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 552 ಟಿಎನ್‌ಆರ್ 2023,**
**ಬೆಂಗಳೂರು, ದಿನಾಂಕ: 13.06.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬರ ಉಪಶಮನಕ್ಕಾಗಿ ಕೃಷಿ ಭಾಗ್ಯ ಯೋಜನೆಯ ಮುಖಾಂತರ ನಿಯಮಾನುಸಾರ ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ರೂ. 100.00 ಕೋಟಿಗಳನ್ನು (ನೂರು ಕೋಟಿಗಳು ಮಾತ್ರ) ಆಯುಕ್ತರು, ಕೃಷಿ ಆಯುಕ್ತಾಲಯ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 552 ಟಿಎನ್‌ಆರ್ 2023, ದಿನಾಂಕ:16.03.2024ರಲ್ಲಿ ಬಿಡುಗಡೆ ಮಾಡಲಾಗಿದ್ದನ್ನು ಅನುಷ್ಠಾನಗೊಳ್ಳದ ಕಾರಣ 2024-25ನೇ ಸಾಲಿನಲ್ಲಿ ಮತ್ತೆ ಕೆಳಕಂಡ ಷರತ್ತುಗಳ ಪಾಲನೆಗೆ ಒಳಪಟ್ಟು ಆಯುಕ್ತರು, ಕೃಷಿ ಆಯುಕ್ತಾಲಯ ಇವರಿಗೆ ಕೃಷಿ ಭಾಗ್ಯ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-102-0-27ಕ್ಕೆ ಬಿಡುಗಡೆ ಮಾಡಿ ಆದೇಶಿಸಿದೆ.

ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಕೃಷಿ ಇಲಾಖೆ ಹಾಗೂ ಕೃಷಿ ಆಯುಕ್ತರು, ಕೃಷಿ ಆಯುಕ್ತಾಲಯ ಈ ಕೆಳಕಂಡ **ಷರತ್ತುಗಳು ಪಾಲನೆಗೆ ಒಳಪಟ್ಟು ಬಳಸಿಕೊಳ್ಳತಕ್ಕದ್ದು.**

I. ಭಾರತ ಸರ್ಕಾರವು ರಾಷ್ಟ್ರೀಯ ವಿಪತ್ತು ಉಪಶಮನ ನಿಧಿಯಿಂದ ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ಬಿಡುಗಡೆ ಮಾಡುವ ರೂ. 100 ಕೋಟಿಗಳ ಅನುದಾನದಲ್ಲಿ ಆಯ್ಕೆಯಾಗುವ ಫಲಾನುಭವಿಗಳು, ರಾಜ್ಯ ಸರ್ಕಾರದ ಕೃಷಿ ಭಾಗ್ಯ ಯೋಜನೆಯಡಿಯಲ್ಲಿನ ಫಲಾನುಭವಿಗಳು ಹಾಗೂ ಪ್ರಸ್ತುತ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ಬಿಡುಗಡೆ ಮಾಡುವ ರೂ. 100 ಕೋಟಿಗಳ ಅನುದಾನದಲ್ಲಿ ಆಯ್ಕೆಯಾಗುವ ಫಲಾನುಭವಿಗಳು ಪುನರಾವರ್ತನೆಯಾಗಬಾರದು.

II. ರಾಜ್ಯ ವಿಪತ್ತು ಉಪಶಮನ ನಿಧಿಯಲ್ಲಿ ಬಿಡುಗಡೆ ಮಾಡುತ್ತಿರುವ ರೂ. 100 ಕೋಟಿಗಳ ಅನುದಾನವನ್ನು ಈಗಾಗಲೇ ಕೃಷಿ ಇಲಾಖೆಯು ಅನುಷ್ಠಾನಗೊಳ್ಳಲಾಗುತ್ತಿರುವ ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಹಾಗೂ ಇದರಡಿಯಲ್ಲಿ ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ ರಾಜ್ಯ ವಿಪತ್ತು ಉಪಶಮನ ನಿಧಿರಡಿ ಹೊಡಿಸಿರುವ ಮಾರ್ಗಸೂಚಿಗಳ ಪ್ರಕಾರ ಬಳಕೆ ಮಾಡುವುದು.

III. ಸದರಿ ಅನುದಾನದ ಬಳಕೆಯಲ್ಲಿ ಮತ್ತು ಇತರೆ ಯೋಜನೆಗಳ ಅಡಿಯಲ್ಲಿ ಆಯ್ಕೆ ಆಗುವ ಫಲಾನುಭವಿಗಳು ಯಾವುದೇ ರೀತಿಯ ಪುನರಾವರ್ತನೆ ಆಗಬಾರದು.

IV. ಸದರಿ ಅನುದಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 (KTPP) ಕಾಯ್ದೆ ಮತ್ತು ನಿಯಮಗಳನ್ವಯ ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಅನುಸರಿಸಿ ಪಾರದರ್ಶಕವಾಗಿ ಟೆಂಡರ್ ಕರೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವುದು.

V. ಬಿಡುಗಡೆ ಮಾಡಲಾದ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು ಹಾಗೂ ಬಳಕೆ ಮಾಡಿದ ಮೊತ್ತದ ಅಂಶವಾರು ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಈ ಇಲಾಖೆಗೆ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆರವರು ಸಲ್ಲಿಸತಕ್ಕದ್ದು.

VI. ಕೃಷಿ ಹೊಂಡಗಳ ನಿರ್ಮಾಣದ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ವಿವರಗಳೊಂದಿಗೆ ಮಂಡಿಸುವುದು.

VII. ಕೃಷಿ ಹೊಂಡಗಳ ನಿರ್ಮಾಣದ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ, ಪ್ರಾರಂಭಿಕ ಹಾಗೂ ಹಂತವಾರು 3 ವ್ಯಕ್ತಿ/ಸಂಸ್ಥೆ ತಪಾಸಣೆ ನಡೆಸುವ ವಿಧಾನವನ್ನು ನಿಯಮಾನುಸಾರ ಕ್ರಮಕೈಗೊಳ್ಳುವುದು.

VIII. ಹಣ ಬಳಕೆಯಲ್ಲಿ ಯಾವುದೇ ಲೋಪವಾದಲ್ಲಿ ಕೃಷಿ ಇಲಾಖೆಯ ಸಂಭಂದಪಟ್ಟ ಅಧಿಕಾರಿ / ನೌಕರರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

IX. ಆಯುಕ್ತರು, ಕೃಷಿ ಆಯುಕ್ತಾಲಯ ಕೆಳಕಂಡ ನಮೂನೆಯಲ್ಲಿ ಈ ಯೋಜನೆ ಅಡಿಯಲ್ಲಿ ಎಲ್ಲಾ ಫಲಾನುಭವಿ ರೈತರ ವಿವರಗಳನ್ನು ಸಂಬಂಧಪಟ್ಟ ಜಿಲ್ಲಾ ಕಛೇರಿಗಳಲ್ಲಿ, ತಾಲ್ಲೂಕು ಕಛೇರಿಗಳಲ್ಲಿ, ಗ್ರಾಮ ಪಂಚಾಯತಿಗಳಲ್ಲಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಈ ಕೆಳಕಂಡ ನಮೂನೆಯಲ್ಲಿ ಪ್ರಕಟಿಸತಕ್ಕದ್ದು. ಮುಂದುವರೆದು ಎಲ್ಲಾ ಫಲಾನುಭವಿ ರೈತರ ವಿವರಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಕೃಷಿ ಆಯುಕ್ತರು, ಕೃಷಿ ಆಯುಕ್ತಾಲಯ ರವರುಗಳು ಕಡ್ಡಾಯವಾಗಿ ತಮ್ಮ ಜಾಲತಾಣದಲ್ಲಿ (ವೆಬ್‌ಸೈಟ್‌ನಲ್ಲಿ) ಪಾರದರ್ಶಕತೆಗಾಗಿ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಈ ಕೆಳಕಂಡ ನಮೂನೆಯಲ್ಲಿ ಪ್ರಕಟಿಸುವುದು-

**ನಮೂನೆ**

| ಫಲಾನುಭವಿ ಹೆಸರು | ಫಲಾನುಭವಿ ವಾಸಿಸುತ್ತಿರುವ ಗ್ರಾಮದ ಹೆಸರು | Last two digits only of Fruits ID | ಫಲಾನುಭವಿ ವಾಸಿಸುತ್ತಿರುವ ಗ್ರಾಮ ಪಂಚಾಯ್ತಿ ಹೆಸರು | ಫಲಾನುಭವಿ ಹೊಂದಿರುವ ಜಮೀನಿನ ಸರ್ವೆ ನಂಬರ್ | ಫಲಾನುಭವಿಯ ಜಮೀನಿನ ವಿಸ್ತೀರ್ಣ | ಫಲಾನುಭವಿಯ ಜಮೀನಿನ GIS Coordinates | ಫಲಾನುಭವಿ ಹೊಂದಿರುವ ಜಮೀನಿನ ಸ್ವರೂಪ ಮಳೆಯಾಶ್ರಿತ/ ನೀರಾವರಿ/ ದೀರ್ಘಕಾಲಿಕ | ನಿರ್ಮಿತವಾಗಿರುವ ಕೃಷಿ ಹೊಂಡದ ಅಳತೆ | ಫಲಾನುಭವಿಗೆ ನೀಡಲಾದ ಅನುದಾನದ ವಿವರ | ಫಲಾನುಭವಿಗೆ ವಿತರಿಸಲಾದ ಇತರೆ ಸಾಮಗ್ರಿಗಳ ವಿವರ ಮತ್ತು ಮೌಲ್ಯ | ನೀರಿನ ಲಭ್ಯತೆಯಿಂದ ಬೆಳೆದಿರುವ ಬೆಳೆಗಳ ವಿವರ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |

**X**. ಕೃಷಿ ಭಾಗ್ಯ ಯೋಜನೆಯ ಅನುಷ್ಠಾನದಿಂದ ನೀರಿನ ಅಭಾವವನ್ನು ನೀಗಿಸಲು ಉಂಟಾದ ಉಪಶಮನ ಕ್ರಮಗಳು ಹಾಗೂ ಸಾರ್ವಜನಿಕರಿಗೆ ಉಂಟಾದ ಉಪಯೋಗಗಳು, ಮುಂದಿನ ದಿನಗಳಲ್ಲಿ ಬರಪರಿಸ್ಥಿತಿ ತಗ್ಗಿಸಲು/ಅಂತರ್ಜಲ ವೃದ್ಧಿಯಾಗಲು ಸಹಕಾರಿಯಾದ ಬಗ್ಗೆ ವಿಸ್ತೃತವಾದ ವರದಿಯನ್ನು ಈ ಇಲಾಖೆಗೆ ಸಲ್ಲಿಸುವುದು.

ಸದರಿ ಅನುದಾನವನ್ನು 2024-25 ನೇ ಸಾಲಿನ ರಾಜ್ಯ ವಿಪತ್ತು ಉಪಶಮನ ನಿಧಿಯ (SDMF) ಲೆಕ್ಕ ಶೀರ್ಷಿಕೆ "2245~08~101~0~01~059 ರಡಿ ಭರಿಸತಕ್ಕದ್ದು.

ರೂ. 100 ಕೋಟಿಗಳ ಅನುದಾನವನ್ನು ಕೃಷಿ ಇಲಾಖೆಯ ಕೃಷಿ ಭಾಗ್ಯ ಯೋಜನೆಯ ಲೆಕ್ಕ ಶೀರ್ಷಿಕೆಯಾದ 2401-00-102-0-27 ಗೆ ಬಿಡುಗಡೆ ಮಾಡತಕ್ಕದ್ದು. (DDO.Code-14379D)

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/470/ವೆಚ್ಚ-7/2024, ದಿನಾಂಕ: 18.04.2024 ಹಾಗೂ ಆಇ/116/ಎಫ್‌ಆರ್/2024, ದಿನಾಂಕ: 26.03.2024 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಸ್.ಆರ್. ಶಿವಶಂಕರ್)**
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ,
(ವಿಪತ್ತು ನಿರ್ವಹಣೆ ಮತ್ತು ನೋ.ಮು).

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (A & E), ಕರ್ನಾಟಕ, ಪಿ.ಬಿ.ನಂ. 5329/5369, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (G & SSA), ಕರ್ನಾಟಕ, ಪಿ.ಬಿ.ನಂ. 5398, ನ್ಯೂ ಬಿಲ್ಡಿಂಗ್'ಆಡಿಟ್ ಭವನ', ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ), ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಆಯುಕ್ತರು, ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ. 7 & 8), ವಿಧಾನಸೌಧ, ಬೆಂಗಳೂರು.
8. ಎಲ್ಲಾ ಜಿಲಾಧಿಕಾರಿಗಳು.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಭೂಮಿ, ನಗರ ಆಸ್ತಿ ದಾಖಲೆಗಳು) ರವರು ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಜಂಟಿ ಕಾರ್ಯದರ್ಶಿ (ಸಂಪುಟ ಶಾಖೆ) ರವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ರವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.